ಅ) ರಾಜ್ಯ ಸರ್ಕಾರ ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್ ಎಂಬ ಸಂಸ್ಥೆಗೆ ನೀಲಗಿರಿ ಬೆಳೆಯಲು ಗೋಮಾಳ ಇನ್ನಿತರ ಭೂಮಿಗಳನ್ನು ಒದಗಿಸಿದೆಯೇ? ಜಿಲ್ಲಾವಾರು ವಿವರಗಳು.

ಆ) ಮೇಲ್ಕಂಡ ಸಂಸ್ಥೆಯ ಸ್ಥಾಪಿತ ಉದ್ದೇಶಗಳು ಹಾಗೂ ಮಾಲೀಕತ್ವ ಯಾರದು?

ಇ) ಮೇಲ್ಕಂಡ ಸಂಸ್ಥೆಗೆ ಯಾವ ಉದ್ದೇಶಗಳಿಗಾಗಿ ಭೂಮಿ ಒದಗಿಸಲಾಗಿದೆ.

ಈ) ಮೇಲ್ಕಂಡ ಸಂಸ್ಥೆಗೆ ಭೂಮಿ ನೀಡದಂತೆ ಸಾರ್ವಜನಿಕ ಪ್ರತಿಭಟನೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಈ.ಟಿ. ಶಂಬುನಾಥ್ (ಅರಣ್ಯ ರಾಜ್ಯ ಸಚಿವರು) :–

ಅ) ಸರ್ಕಾರವು ತನ್ನ ಆದೇಶ ಎಫ್‌ಎಫ್‌ಡಿ 180 ಎಫ್‌ಪಿಸಿ 84 ದಿನಾಂಕ 18–1–1986ರಲ್ಲಿ ಈ ಸಂಸ್ಥೆಗೆ 30,000 ಹೆಕ್ಟೇರು ವಿವಿಧ ಅರಣ್ಯ ಭೂಮಿಯನ್ನು ನೆಡುತೋಪುಗಳನ್ನು ಬೆಳೆಸಲು ಆದೇಶಿಸಿರುತ್ತದೆ.

ಬಿ) ಕರ್ನಾಟಕ ಪಲ್ಪ್‌ವುಡ್ ಸಂಸ್ಥೆಯು 1990ರ ಮಳೆಗಾಲದವರೆಗೆ ಒಟ್ಟು 9591 ಹೆಕ್ಟೇರು ಭೂಮಿಯಲ್ಲಿ ನೆಡುತೋಪು ಬೆಳೆಸಿದೆ.

ನೆಡುತೋಪು ಬೆಳೆಸಿದ ಜಿಲ್ಲಾವಾರು ಪ್ರದೇಶ ಈ ರೀತಿ ಇದೆ :

ಶಿವಮೊಗ್ಗ	3705.75 ಹೆಕ್ಟೇರು
ಧಾರವಾಡ	3218.40 ಹೆಕ್ಟೇರು
ಬೆಳಗಾಂ	1372.60 ಹೆಕ್ಟೇರು
ಚಿಕ್ಕಮಗಳೂರು	1030.25 ಹೆಕ್ಟೇರು
ಬೆಂಗಳೂರು	264.00 ಹೆಕ್ಟೇರು
ಒಟ್ಟು	9591.00 ಹೆಕ್ಟೇರು

ಆ) ಉದ್ದೇಶ :– ಅಧಃಪತನಗೊಂಡ ಅರಣ್ಯ ಪ್ರದೇಶವನ್ನು ಮತ್ತು ಬಂಜರು ಭೂಮಿಯನ್ನು ಗ್ವಾಲಿಯರ್ ರೆಯನ್ಸ್ ಸಂಸ್ಥೆಯವರು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದೊಡನೆ ಸಹಭಾಗಿತ್ವದಿಂದ ರಚಿಸಿದ ಕರ್ನಾಟಕ ಪಲ್ಪ್‌ವುಡ್ ನಿಯಮಿತ ಅರಣ್ಯ ನೆಡುತೋಪು ಬೆಳೆಸಿ, ಅದರ ಉತ್ಪತ್ತಿಯನ್ನು ರೆಯನ್ಸ್ ಕಾರ್ಖಾನೆಗೆ ಸರಬರಾಜು ಮಾಡುವುದು. ಉತ್ಪತ್ತಿಯಲ್ಲಿ ಶೇಕಡ 12.5 ಭಾಗವನ್ನು ಮಾತ್ರ ಗೇಣಿ ಬಾಡಿಗೆಯಾಗಿ ಸರ್ಕಾರಕ್ಕೆ ಕೊಡುವುದು.

ಮಾಲೀಕತ್ವ :– ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ 51 ಭಾಗ, ಗ್ವಾಲಿಯರ್ ರೆಯನ್ಸ್ ಮಾಲೀಕರದು 49 ಭಾಗ.

ಇ) ಪಲ್ಪ್‌ವುಡ್ ಬೆಳೆಯುವ ಉದ್ದೇಶಕ್ಕಾಗಿ ಒದಗಿಸಿದೆ.

ಈ) ಬಂದಿದೆ.

ದಿನಾಂಕ : 28–11–1990ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ಕಾಲು ರೋಗ

477. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?